ಗಂಭೀರವಾಗಿರುವ ಅವರು (ಅದು ಭಯ ಹುಟ್ಟಿಸುವ ಗಾಂಭೀರ್ಯವಲ್ಲ. ಚಿಂತೆಯೂ ಹೌದೋ ಅಲ್ಲವೋ ಎಂಬ ಪ್ರಸನ್ನತೆಯೂ ಕೂಡಿದ, ನೋಡಿದರೆ ಗೌರವವುಕ್ಕಿಸುವ, ಧೈರ್ಯ ಉಡುಗಿಸದ ಗಾಂಭೀರ್ಯ) ನಮ್ಮತ್ತ ಸಣ್ಣ ನಗು ಬೀರಿದರೆಂದರೆ ನಮಗೆ ನಾವು ಪುನೀತರಾದೆವೆನಿಸುತ್ತಿತ್ತು.

ಸಾತ್ವಿಕರೂ ಪ್ರೇಮಮಯಿಯೂ ಆದ ಅವರು ಅಷ್ಟು ಮಕ್ಕಳು ಸೇರಿ ಗಲಾಟೆ ಗೌಜಿ ಮಾಡುವಾಗ ಒಮ್ಮೆಯೂ ಕರಕರೆಯೆಂದು ಸಿಡುಕಿದ್ದಿಲ್ಲ. ಹೊಡೆದದ್ದಿಲ್ಲ. ಬದಲು ದನಿಯನ್ನು ತುಸುವೇ ಏರಿಸಿ, "ಏನದು!" ಎಂದರೆ ಸಾಕು, ನಮ್ಮ ಮರ್ಯಾದೆ ಹೋದಂತಾಗಿ ಜಾಗ ಖಾಲಿ ಮಾಡುತ್ತಿದ್ದೆವು. ಒಂದು ಶಬ್ದ ಕೂಡ ಗದರದೆ ನಮ್ಮನ್ನು ಸೂಕ್ಷ್ಮಗೊಳಿಸಿದ ತಂದೆ ಅವರು. ಸಾಹಿತ್ಯ ಸಂಗೀತವೆಂದರೆ ವಿಶೇಷ ಪ್ರೀತಿಯಿತ್ತು ಅವರಿಗೆ. ಮನೆಯಲ್ಲಿ ಒಳ್ಳೆಯ ಪುಸ್ತಕ ಸಂಗ್ರಹವಿಟ್ಟಿದ್ದರು. ವಾಲ್ಮೀಕಿ ಮತ್ತು ತುಲಸೀ ರಾಮಾಯಣಗಳನ್ನು ದಿನಾ ಒಂದೊಂದು ಅಧ್ಯಾಯ ಓದದೆ ಊಟ ಮಾಡುತ್ತಿರಲಿಲ್ಲ. ಸುಂದರವಾಗಿ ಬೈಂಡು ಹಾಕಿಸಲ್ಪಟ್ಟ ಅವರ ನಿತ್ಯಪಾರಾಯಣದ ಆ ಗ್ರಂಥಗಳನ್ನು ತೆರೆದರೆ ಸಾಕು, ಅದರಲ್ಲಿರುವ ಚಿತ್ರಗಳನ್ನು ನೋಡುತ್ತ ನಾವು ಪರವಶರಾಗುತ್ತಿದ್ದೆವು. ದಪ್ಪವಾದ ನಯವಾದ ಕಾಗದದ ಮೇಲೆ ಸ್ವತಃ ಕಥೆ ಹೇಳುವ ಬಣ್ಣಬಣ್ಣದ ಚಿತ್ರಗಳು, ಅತ್ತ ಇತ್ತ ಹೋಗುವಾಗೆಲ್ಲ ತಂದೆಯವರ ಬಾಯಿಂದ ಶ್ಲೋಕಗಳು, ದೋಹೆಗಳು ರಾಗವಾಗಿ ಭಾವಭಾರವಾಗಿ ಹೊಮ್ಮುತ್ತಿದ್ದವು. ಅವನ್ನೆಲ್ಲ ಕೇಳುತ್ತ ಬಂದ ನನಗೆ ಒಬ್ಬ ಸಂಗೀತಗಾರ ಎಂತಹ ಘನ ರಾಗದಲ್ಲಿ ಅವನ್ನು ಹಾಡಿದರೂ ಕೇಳಿದಂತೆಯೇ ಆಗುವುದಿಲ್ಲ. ಯಾಕೆಂದರೆ ದೋಹೆಗಳೆಂದರೆ ನನಗೆ ಅದೇ ರಾಗ. ಆ ರಾಗವೆಂದರೆ ನನ್ನ ತಂದೆ. ಹೊತ್ತುಗೊತ್ತಿನ ಪರಿವೆಯೇ ಇಲ್ಲದೆ ಬರುವ ಕಕ್ಷಿಗಾರರನ್ನೆಲ್ಲ ಅತ್ಯಂತ ಸಾವಧಾನತೆಯಿಂದ ವಿಚಾರಿಸಿ ಕಳಿಸಿ ಅವರು ಒಳಗೆ ಬರುವಾಗ ಒಮ್ಮೊಮ್ಮೆ ರಾತ್ರಿ ಹನ್ನೊಂದು ಹನ್ನೊಂದೂವರೆ. ದಣಿದಿದ್ದರೂ ಬಿಡದೆ ಪಾರಾಯಣ, ಆ ಮೇಲೆಯೇ ಊಟ. ನನ್ನ ತಾಯಿ ಊಟದ ಕೋಣೆಯ ಕಂಬಕ್ಕೆ ಒರಗಿ ನಿದ್ದೆ ತೂರುತ್ತ ಅವರಿಗಾಗಿ ಕಾಯುತ್ತ ಕುಳಿತಿರುತ್ತಿದ್ದಳು. ತಂದೆಯ ನೆನಪಿನೊಂದಿಗೆ ನನಗೆ ಥಟ್ಟನೆ ಬರುವುದು ಅಮ್ಮನ ಈ ಚಿತ್ರವೇ.

ತಂದೆ ಬಂದರೆ ನಾವು ಮಕ್ಕಳು ದೊಡ್ಡವರಾದಿಯಾಗಿ ಎದ್ದು ನಿಲ್ಲುತಿದ್ದೆವು. (ಹಾಗೆಂತ ಯಾರೂ ನಮಗೆ ಹೇಳಿರಲಿಲ್ಲ. ಅಥವಾ ಅಲಿಖಿತ ಆಜ್ಞೆಯೋ ಶಾಸನವೊ ಇರಲಿಲ್ಲ). ಏನೋ, ಅಮ್ಮ ಬಂದರೆ ನಾವು ಎದ್ದು ನಿಲ್ಲುತ್ತಿರಲಿಲ್ಲ!! ಆಕೆಯೆಂದರೆ ಸಲುಗೆ. ಬರೀ ಸಲುಗೆಯಲ್ಲ. ಸಲುಗೆ ಮಿಶ್ರಿತ ಭಯವೂ.

## ನನ್ನಮ್ಮನ 'ಹದ' ಮಂತ್ರ

ನನ್ನಮ್ಮ ಆಗಾಗ ನುಡಿಯುತ್ತಿದ್ದ ಒಂದು ಶಬ್ದ 'ಹದ'. ಪ್ರಾಯಶಃ ಅದು ಅವಳ ಭವತಾರಣ ಮಂತ್ರವೆ ಆಗಿತ್ತು. ಅತಿದುಃಖ, ಅತಿನಗೆ, ಅತಿಸಂತೋಷ, ಅತಿಸಿಟ್ಟು – ಹೀಗೆ ಯಾವುದೇ ಅತಿಯಲ್ಲಿಯೂ ಆಕೆ ಗದರಿ 'ಎಲ್ಲದಕ್ಕೂ ಒಂದು ಹದಬೇಕು' ಎಂದು ಬಿರುಸಾಗಿ ತೀರ್ಮಾನ ಹೇಳುತ್ತಿದ್ದಳು. ಅಡಿಗೆಗೆ ಹೋಳು ಹೆಚ್ಚುವಾಗಲೂ ಪ್ರತಿಯೊಂದು ಅಡಿಗೆಯ ಮಸಾಲೆಗೂ ಅದರ ಕುದಿತದ ಅವಧಿಗೆ, ಕೊನೆಗೆ ಒಗ್ಗರಣೆಗೂ, ಒಂದು ಹದ! ಈ ಹದದ ಕಲ್ಪನೆ ಇರುವುದು ಋಷಿಮುನಿಗಳಿಗಿಂತ ಹೆಚ್ಚು ನಮ್ಮ ಅಡಿಗೆಮನೆಯಲ್ಲಿಯೆ? ಮನೆಯ ಒಳಬಾಳಿನಲ್ಲಿ? ಎಲ್ಲಿ ಹದ ತಪ್ಪಿತೋ ಅದು ವೈನದ ಕೆಲಸವಲ್ಲ ಎನ್ನುವ ಅವಳ ಪ್ರಕಾರ ಅದಕ್ಕೊಂದು ಯಾವ ನಿರ್ದಿಷ್ಟ ಪ್ರಮಾಣವಿಲ್ಲ, ನಿಖರತೆಯಿಲ್ಲ. ಅವರವರ ಮಟ್ಟಿಗೆ ಅವರವರೇ ಕಂಡುಕೊಳ್ಳಬೇಕಾದ